**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ.** **5005/2026**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಜವಹರಲಾಲ್ ನಾಯ್ಕು | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಕಣ್ಣಾನಾಯ್ಕು | **12.06.2026** |
| **ವಯಸ್ಸು** | : | 62 ವರ್ಷ | |
| **ವೃತ್ತಿ** | : | ವ್ಯವಸಾಯ | **ಫ್ರಾ.ಸಾಃ 3** |
| **ವಾಸ ಸ್ಥಳ** | : | ಆರ್.ಬಿ ತಾಂಡ, ಜಾಗೇರಿ | **ಚಾ.ಸಾಃ 4** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ 1 ನನ್ನ ನಾದಿನಿ ಮಗಳು. ಚಾಸಾ 2 ಗೊತ್ತು. ಚಾಸಾ 3 ನನ್ನ ಮಾವ. ಚಾಸಾ 5 ಗೊತ್ತು. ಚಾಸಾ 6 ನನ್ನ ನಾದಿನಿ. ಈಗ ತೋರಿಸುತ್ತಿರುವ ಮಹಜರಿನಲ್ಲಿ ನನ್ನ ಸಹಿ ಇರುತ್ತದೆ. ಸಹಿಯನ್ನು ನನ್ನ ಮನೆಯ ಬಳಿ ಮಾಡಿರುತ್ತೇನೆ. ಮಹಜರ್ ಅನ್ನು ನಿಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಮದ್ಯಾಹ್ನ ಸುಮಾರು 12.00 ಗಂಟೆ ಸಮಯದಲ್ಲಿ ಸಹಿ ಮಾಡಿರುತ್ತೇನೆ. ಸುಮಾರು 6-7 ತಿಂಗಳ ಹಿಂದೆ ಸಹಿ ಮಾಡಿರುತ್ತೇನೆ. ಪೋಲಿಸರು ಸ್ಥಳದಿಂದ ಒಂದು ದೊಣ್ಣೆ ಮತ್ತು ಚಪ್ಪಲಿಯನ್ನು ಅಮಾನತ್ತುಪಡಿಸಿಕೊಂಡರು. ದೊಣ್ಣೆ ಮತ್ತು ಚಪ್ಪಲಿಯನ್ನು ಈಗಾಗಲೇ ಮು.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಆರೋಪಿ ಮತ್ತು ಚಾಸಾ 1 ರಿಂದ 3 ರವರ ನಡುವೆ ಆದ ಜಗಳವನ್ನು ನಾನು ನೋಡಿರುವುದಿಲ್ಲ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಅನುಮತಿ ಕೇಳಿದ್ದಾರೆ, ಅನುಮತಿ ನೀಡಿದೆ)

ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ದಿಃ 12.06.2025 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ಚಾಸಾ 1 ರವರು ಮನೆಯಲ್ಲಿದ್ದಾಗ ಆರೋಪಿಯು ಚಾಸಾ 1 ರವರಿಗೆ ದೈಹಿಕ ಸಂಪರ್ಕ ಹೊಂದುಬಾ ಎಂದು ಕರೆದನು, ಅದಕ್ಕೆ ಚಾಸಾ 1 ರವರು ನಿರಾಕರಿಸಿದರು ಎಂದರೆ ಸರಿಯಲ್ಲ. ಆ ಉದ್ದೇಶವನ್ನು ಇಟ್ಟುಕೊಂಡು ದಿಃ 13.06.2025 ರಂದು ಬೆಳಗ್ಗೆ 7.00 ಗಂಟೆ ಸಮಯದಲ್ಲಿ ಆರೋಪಿಯ ಚಾಸಾ 1 ರವರ ಮನೆಯ ಬಳಿ ಬಂದು ಆಕೆಗೆ ಲೋಫರ್ ಮುಂಡೆ ಎಂದು ಕೆಟ್ಟ ಪದಗಳಿಂದ ಬೈದು ಕೈಯಿಂದ ಕುತ್ತಿಗೆಯ ಬಳಿ ಹೊಡೆದನು, ಮತ್ತು ಚಪ್ಪಲಿಯಿಂದ ಮೈ ಕೈಗೆ ಹೊಡೆದನು, ಬಿಡಿಸಲು ಬಂದ ಚಾಸಾ 2 ರವರ ಜುಟ್ಟನ್ನು ಹಿಡಿದು ಎಳೆದಾಡಿ ಬೆನ್ನಿಗೆ ಹೊಡೆದನು, ಚಾಸಾ 3 ರವರು ಜಗಳ ಬಿಡಿಸಲು ಬಂದಾಗ ಆತನನ್ನು ತಳ್ಳಿ ಬಿಳಿಸಿದನು, ನಾನು ಮತ್ತು ಚಾಸಾ 5 ಜಗಳ ಬಿಡಿಸಿದೆವು, ನಂತರ ಆರೋಪಿಯು ದೊಣ್ಣೆಯಿಂದ ಚಾಸಾ 1 ರಿಂದ 3 ರವರಿಗೆ ಹೊಡೆಯಲು ಬಂದಾಗ ನಾವು ದೊಣ್ಣೆಯನ್ನು ಕಿತ್ತುಕೊಂಡೆವು, ಆರೋಪಿಯು ಚಾಸಾ 1 ಮತ್ತು 2 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಹೋದನು ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ನಿಪಿ 3 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 16.06.2025 ರಂದು ಸಮಯ 2.30-3.00 ಗಂಟೆ ಸಮಯದಲ್ಲಿ ಮಹಜರಿಗೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ನನಗೆ ದಿನಾಂಕ ಸಮಯ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಮಹಜರ ಸಮಯದಲ್ಲಿ ಚಾಸಾ 7 ಮತ್ತು 8 ರವರು ಇದ್ದರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ 1 ಮತ್ತು 2 ಅನ್ನು ನಾನು ಪೋಲೀಸರಿಗೆ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ- ಶ್ರೀ ಬಿ.ಎಸ್.ಆರ್ ವಕೀಲರಿಂದ</u>**

ಮು.ಮಾ 1 ಮತ್ತು 2 ಅನ್ನು ಪೋಲೀಸರು ತೆಗೆದುಕೊಂಡು ಹೋದರು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ